ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

ಸಿ.ಸಿ. ನಂ. **2111/2025** ಸಿ. ಡಬ್ಲ್ಯೂ: **3** ಪಿ ಡಬ್ಲ್ಯೂ ಃ **3**

ಸಾಕ್ಷಿಯ ಹೆಸರು ಃ ಹನಮಂತಪ್ಪ ಪೂಜಾರ

ತಂದೆಯ ಹೆಸರು ಃ ಸಿದ್ದಲಿಂಗಪ್ಪ.

ವಯಸ್ಸು ಃ 44 ವರ್ಷ

ಉದ್ಯೋಗ ಃ ಚಾಲಕ.

ವಾಸಸ್ಥಳ ಃ ಲಕ್ಷ್ಮೇಶ್ವರ, ತಾಃ ಲಕ್ಷ್ಮೇಶ್ವರ.

ದಿನಾಂಕಃ 04/05/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದ

1. ಸಾಕ್ಷಿಯು ದಾಖಲೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು,ಸದರಿ ದಾಖಲೆಯನ್ನು ಈಗಾಗಲೇ ನಿಪಿ. 5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 5 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 26-06-2025 ರಂದು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯ ಶವಾಗಾರದಲ್ಲಿ ಮಾಡಿದ್ದೇನೆ. ಆ ಸಮಯದಲ್ಲಿ ನಾನು, ಚಾಸಾ 2 ಮತ್ತು ಪೋಲೀಸರು ಇದ್ದರು. ಪ್ರಕಾಶ ಗಣಪತಿ ಹುಲ್ ಬಜಾರ್ ನ ಶವ ಪಂಚನಾಮೆಯನ್ನು ಪೋಲೀಸರು ಬೆಳಿಗ್ಗೆ 08-15 ರಿಂದ 09-00 ಗಂಟೆಯವರೆಗೆ ಮಾಡಿದ್ದರು. ಸಮಯ ಶವ ಪಂಚನಾಮೆ ಕಾಲಕ್ಕೆ ತೆಗೆದ ಭಾವ ಚಿತ್ರದಲ್ಲಿ ನಾನು ಹಾಜರಿದ್ದು, ಸದರಿ ಭಾವ ಚಿತ್ರವನ್ನು ಈಗಾಗಲೇ ನಿಪಿ. 2 ಎಂದು ಗುರುತಿಸಲಾಗಿದೆ.

2. ಸಾಕ್ಷಿ ಮತ್ತೊಂದು ದಾಖಲೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ. 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 3 ಸಿ ಎಂದು ಗುರುತಿಸಲಾಯಿತು. ಅಪಘಾತವಾದ ಮಾರನೇ ದಿನ ಅಪಘಾತ ಸ್ಥಳದಲ್ಲಿ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು ಮತ್ತು ಚಾಸಾ 3 ಇದ್ದೇವು. ಪಂಚನಾಮೆಯ ಕಾಲಕ್ಕೆ ಬುಲೋರೋ ವಾಹನ ಮತ್ತು ಪಲ್ಸರ್ ಮೋಟಾರ್ ಸೈಕಲನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಆಗ ಸಮಯ 11-00 ರಿಂದ 12-00 ಆಗಿತ್ತು. ಮೂರು ಭಾವ ಚಿತ್ರಗಳಲ್ಲಿ ನಾನು ಇದ್ದು, ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದಿರುತ್ತಾರೆ. ಸದರಿ ಭಾವ ಚಿತ್ರಗಳನ್ನು ಒಟ್ಟಾಗಿ ನಿಪಿ. 4 ಎಂದು ಈಗಾಗಲೇ ಗುರುತಿಸಲಾಗಿದೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.